(ಇಂದು ದಿಃ 19-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು :- 1 ಮತ್ತು 2ನೇ ಪ್ರತಿವಾದಿಗಳ ಪರ ಶ್ರೀ. NY ವಕೀಲರಿಂದ :-**

ಮೊಗಲಯ್ಯ ಮತ್ತು ಬುಗಯ್ಯ ಅಣ್ಣ ತಮ್ಮಂದಿರು. ಅವರು ಬೇರೆ ಆಗಿ ಸುಮಾರು 50 ವರ್ಷ ಆಗಿದೆ. ಅವರವರ ಭಾಗದ ಸ್ವತ್ತುಗಳಲ್ಲಿ ಅವರವರು ಕಬ್ಜಾದಲ್ಲಿದ್ದಾರೆ ಎಂದರೆ ಸರಿ. ವಾದಿ ಮುಂಬೈಗೆ ಹೋಗಿದ್ದ ಅಲ್ಲಿ 3-4 ವರ್ಷ ವಾಸ ಇದ್ದ ಎಂದರೆ ಸರಿ. ಅಲ್ಲಿ ಆತ ಏನು ಕೆಲಸ ಮಾಡುತ್ತಿದ್ದ ನನಗೆ ಗೊತ್ತಿಲ್ಲ. ಆತ ಮುಂಬೈನಲ್ಲಿದ್ದಾಗ ಆತನ ಅಣ್ಣನಿಗೆ ಹಣ ಕಳುಹಿಸುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಬುಗಯ್ಯ ಮತ್ತು ಮನೆಯರು ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಮಾಡಿರಬಹುದು ನನಗೆ ಗೊತ್ತಿಲ್ಲ. ಅದು ಅವರಿಗೆ ಗೊತ್ತು. ವಾದಿ ವೈನ ಶಾಪನಲ್ಲಿ ಪಾಲುದರಿಕೆ ಹೊಂದಿದ್ದಾನೆ ಎಂದು ನನ್ನ

ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ಸಾಕ್ಷಿ ಮುಂದುವರೆದು ಆದರೆ ಆತ ಪಾಲುದಾರಿಕೆ ಹೊಂದಿದ್ದಾರೆ ಎಂದು ಹೇಳುತಾರೆ. ಯಾವ ವರ್ಷದಿಂದ ಪಾಲುದಾರಿಕೆಯಲ್ಲಿಯಲ್ಲಿದ್ದಾರೆ ಎಂದರೆ 3-4 ವರ್ಷ ಆಯಿತು.

ಬುಗಯ್ಯ ಸ್ವಂತಕ್ಕೆ ಮನೆ ಕಟ್ಟುಕೊಂಡಿದ್ದಾರೆ ಎಂದರೆ ಸರಿ. ಹಿರಿಯರ ಮನೆಯನ್ನು ವಾದಿಗೆ ಕೊಟ್ಟಿದ್ದಾರೆ. ಸಾಕ್ಷಿ ಮುಂದುವರೆದು ವಾದಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಅಂದಿನಿಂದ ಅವರವರ ಮನೆಗಳಲ್ಲಿ ಅವರವರು ವಾಸ ಇದ್ದಾರೆ ಎಂದರೆ ಸರಿ. ಒಬ್ಬರ ಆಸ್ತಿಗೆ ಇನ್ನೊಬ್ಬರು ಸಂಬಂಧ ಇಲ್ಲ ಎಂದರೆ ಏನು ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿನ ಸರ್ವೆ ನಂಬರ, ವಿಸ್ತೀರ್ಣ ಮತ್ತು ಚೆಕಂಬದಿ ಹೇಳಲು ಆಗುವುದಿಲ್ಲ. ವಾದಿಗೆ ಇಬ್ಬರು ಹೆಂಡತಿ ಎಂದರೆ ಸರಿ. ಬುಗಯ್ಯ ಕಾನೂನು ಬದ್ದ ಶೇಂದಿ ಮಾರಾಟದ ವ್ಯವಹಾರ ಮಾಡುತ್ತಿದ್ದ ಎಂದರೆ ಸರಿ. ಸುಮಾರು 30-40 ವರ್ಷ ಸದರಿ ವ್ಯವಹಾರ ಮಾಡಿದ್ದಾರೆ ಎಂದರೆ ಸರಿ. ಸದರಿ ವ್ಯವಹಾರದಿಂದ ಬಂದ ಸಂಪಾದನೆಯಿಂದ ಬುಗಯ್ಯ ದಾವಾ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬುಗಯ್ಯನಿಗೆ ಮಾಹಾದೇವಮ್ಮ ಎಂಬ ಇನ್ನೊಬ್ಬ ಹೆಂಡತಿ ಇದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಅವಳು ಗಂಗಾರವನಪಲ್ಲಿಯಲ್ಲಿ ಬುಗಯ್ಯನ ಮನೆಯಲ್ಲಿ ವಾಸ ಇದ್ದಾಳೆ ಎಂದರೆ ಸರಿ. 2ನೇ ಪ್ರತಿವಾದಿ ಜೊತೆಗೆ ವಾಸ ಇದ್ದಾರೆ ಎಂದರೆ ಸರಿ. ಬುಗಯ್ಯ ಮಾಹಾದೇಮಮ್ಮಳ ಹೆಸರಿನಲ್ಲಿ ಕೂಡ ಆಸ್ತಿ ಮಾಡಿದ್ದಾರೆ ಎಂದರೆ ಮಾಡಿರಬಹುದು ನನಗೆ ಗೊತ್ತಿಲ್ಲ. ವಾದಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಕಾರಣ ಆತನ ಮೊದಲ ಹೆಂಡತಿ ಜಗಳ ಮಾಡಿಕೊಂಡು ಬಿಟ್ಟು ಹೋಗಿದ್ದಾಳೆ ಎಂದರೆ ತವರು ಮನೆಗೆ ಹೋಗಿದ್ದಾಳೆ ಆದರೆ ಜಗಳ ಮಾಡಿಕೊಂಡು ಹೋದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯ ಮೊದಲನೇ ಹೆಂಡತಿ ಮಗಳು 2ನೇ ಪ್ರತಿವಾದಿ ಎಂದರೆ ಸರಿ. ಬುಗಯ್ಯನಿಗೆ ಮಕ್ಕಳಿಲ್ಲದ ಕಾರಣ ಆತ ಕಾಶಮ್ಮಳನ್ನು ಮನೆಗೆ ತಂದು ಸಾಕಿಕೊಂಡು ತನ್ನ ಆಸ್ತಿಗಳನ್ನು ಆಕೆಗೆ ಕೊಟ್ಟಿದ್ದಾರೆ ಎಂದರೆ 2ನೇ ಪ್ರತಿವಾದಿ ಬುಗಯ್ಯನ ಮನೆಯಲ್ಲಿ ಬೆಳೆದಿದ್ದಾಳೆ ಆಸ್ತಿಗಳನ್ನು ಕೊಟ್ಟಿರಬಹುದು. ಸದರಿ ಆಸ್ತಿಳನ್ನು ಮೋಹನ ಮತ್ತು ಕಾಶಮ್ಮ ನೋಡಿಕೊಳ್ಳುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿ ಮದುವೆಯನ್ನು ಬುಗಯ್ಯ ಮತ್ತು 1ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ಸರಿ. ಬುಗಯ್ಯ, 1ನೇ ಪ್ರತಿವಾದಿ, 2 ಮತ್ತು 3ನೇ ಪ್ರತಿವಾದಿಗಳ ಆಸ್ತಿಗಳಿಗೆ ವಾದಿ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ನಾನು ಉತ್ತರಿಸಲಾರೆ. ವಾದಿ ಬುಗಯ್ಯ ಬದುಕಿರುವಾಗ ಯಾವತ್ತು ಭಾಗ ಕೇಳಿರಿಲಿಲ್ಲ ಎಂದರೆ ಆಗಾಗ ಕೇಳುತ್ತಿದ್ದ ಎಂದು ಹೇಳುತ್ತಾರೆ. ಯಾವ ವರ್ಷ ಕೇಳಿದ್ದಾರೆ ನನಗೆ ಗೊತ್ತಿಲ್ಲ. ಆಗಾಗ ವಾದಿ ಭಾಗ ಕೇಳುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬುಗಯ್ಯ ತೀರಿಹೋದ ಮೇಲೆ ವಾದಿಯ 2ನೇ ಹೆಂಡತಿ ಮತ್ತು ಮಕ್ಕಳ ಒತ್ತಾಯದ ಮೇರೆಗೆ ಈ ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ ಸಲ್ಲಿಸಿರಬಹುದು. ವಾದಿ ಆಗಾಗ ಬುಗಯ್ಯನಿಗೆ ಹಣ ಕೊಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 95 ವಾದಿ ಮತ್ತು ಪ್ರತಿವಾದಿಯರ ಹಿರಿಯರ ಆಸ್ತಿ ಎಂದರೆ ಸರಿ. ಅದರಲ್ಲಿ ಮಾತ್ರ ವಾದಿ ಮತ್ತು 2ನೇ ಪ್ರತಿವಾದಿಗೆ ಭಾಗ ಇದೆ ಎಂದರೆ ಸರಿ. ವಾದಿ ಮತ್ತು 2ನೇ ಪ್ರತಿವಾದಿ ಅವರವರ ಭಾಗದ ಜಮೀನಿನಲ್ಲಿ ಪ್ರತ್ಯೇಕ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿ.

2ನೇ ಪ್ರತಿವಾದಿಗೆ ಹಣದ ಅವಶ್ಯಕತೆಯಿದ್ದ ಕಾರಣ ತನ್ನ ಜಮೀನನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಖರೀದಿ ಪಡೆದುಕೊಂಡ ಜಮೀನಿನಲ್ಲಿ 3ನೇ ಪ್ರತಿವಾದಿ ಕಬ್ಜಾದಲ್ಲಿದ್ದಾರೆ ಎಂದರೆ ಸರಿ. ಬುಗಯ್ಯನ ಸ್ವಂತ ಸಂಪಾದನೆ ಆಸ್ತಿಗಳಿಗೆ ಮತ್ತು ವಾದಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿ ತೆಲಗು ಭಾಷಿಕನಾಗಿದ್ದು ಶ್ರೀ. NM ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಿ ಸಾಕ್ಷಿ ವಿಚಾರಣೆ ಮಾಡಲಾಯಿತು.)**

**(3ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು ಕಾರಣ ವಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**